**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ವಿಷಯ: ಕೆಎಸ್‌ಆರ್‌ಟಿಸಿಗೆ ಪ್ರತಿಷ್ಟಿತ ರಾಷ್ಟ್ರೀಯ "ಎಎಸ್‌ಆರ್‌ಟಿಯು ಎಕ್ಸಲೆನ್ಸ್ ಪ್ರಶಸ್ತಿ 2017"**

*****

**ನವದೆಹಲಿ ದಿನಾಂಕ: 16ನೇ ಮಾರ್ಚ್ 2017:** ಕೆಎಸ್‌ಆರ್‌ಟಿಸಿಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸಂಸ್ಥೆಯು 2015-16ನೇ ಸಾಲಿನಲ್ಲಿ ನಿವ್ವಳ ರೂ.114.95 ಕೋಟಿ ಲಾಭವನ್ನುಗಳಿಸಿದ್ದು, ದೇಶದ ರಸ್ತೆ ಸಾರಿಗೆ ನಿಗಮಗಳಲ್ಲಿಯೇ, ಸದರಿ ವರ್ಷದಲ್ಲಿ ಅತ್ಯಧಿಕ ಲಾಭವನ್ನುಗಳಿಸಿದ ಸಂಸ್ಥೆಯೆಂದು ಕೆಎಸ್‌ಆರ್‌ಟಿಸಿಗೆ "ಎಎಸ್‌ಆರ್‌ಟಿಯು ಎಕ್ಸಲೆನ್ಸ್ ಪ್ರಶಸ್ತಿ-2017" ಲಭಿಸಿರುತ್ತದೆ. ನವದೆಹಲಿಯಲ್ಲಿ ನಡೆದ ಎ.ಎಸ್.ಆರ್.ಟಿ.ಯು 61ನೇ ವಾರ್ಷಿಕ ಸಮ್ಮೇಳನದಲ್ಲಿ ಶ್ರೀ. ಸಂಜಯ್ ಮಿತ್ರ, ಭಾಆಸೇ, ಕಾರ್ಯದರ್ಶಿಗಳು, ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯ, ಭಾರತ ಸರ್ಕಾರರವರು ಶ್ರೀ.ಎಸ್.ಆರ್.ಉಮಾಶಂಕರ್, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು ಕೆಎಸ್‌ಆರ್‌ಟಿಸಿರವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಶ್ರೀ.ಪಿ.ಎಸ್ ಆನಂದ್‌ರಾವ್, ಕಾರ್ಯನಿರ್ವಾಹಕ ನಿರ್ದೇಶಕರು, ಎಎಸ್‌ಆರ್‌ಟಿಯು ಹಾಗೂ ಶ್ರೀ.ಕೆ.ಎಸ್.ವಿಶ್ವನಾಥ್, ಪ್ರಧಾನ ವ್ಯವಸ್ಥಾಪಕರು (ಸಂಚಾರ), ಶ್ರೀ. ಬಿ.ಸಿ ಗಂಗಣ್ಣಗೌಡ, ಮುಖ್ಯ ಯಾಂತ್ರಿಕ ಶಿಲ್ಪಿ, ಮತ್ತು ಶ್ರೀ ಜಗದೀಶ್ ಚಂದ್ರ, ಮುಖ್ಯ ಕಾಮಗಾರಿ ಅಭಿಯಂತರರು ಕೆಎಸ್‌ಆರ್‌ಟಿಸಿ ರವರುಗಳು ಉಪಸ್ಥಿತರಿದ್ದರು.

**ಎಎಸ್‌ಆರ್‌ಟಿಯು:-** ರಾಜ್ಯ ರಸ್ತೆ ಸಾರಿಗೆ ಉದ್ಯಮಗಳ ಒಕ್ಕೂಟವಾಗಿದ್ದು, ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯ, ಭಾರತ ಸರ್ಕಾರ ರವರಿಂದ ಸ್ಥಾಪಿಸಲ್ಪಟ್ಟಿರುತ್ತದೆ. ಎ.ಎಸ್.ಆರ್.ಟಿ.ಯು ದೇಶದ ನಾನಾ ರಾಜ್ಯಗಳ 62 ರಸ್ತೆ ಸಾರಿಗೆ ನಿಗಮಗಳ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಯಾಗಿದೆ.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**